ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, 1995ರ ಕರ್ನಾಟಕ ಸಿವಿಲ್‌ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1995ರ ಕರ್ನಾಟಕ ಸಿವಿಲ್ ಸಂಹಿತೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

### 3) ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ 1995ರ ಕರ್ನಾಟಕ ಕಾನೂನು ನೆರವುಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾಪವನ್ನು ಮಂಡಿಸಲಾಯಿತು**

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ಕಾನೂನು ನೆರವು ಮಂಡಳಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಇದು ಸಹ ಸರಳವಾಗಿರತಕ್ಕ ತಿದ್ದುಪಡಿಯಾಗಿದೆ. ಈಗ ಇರುವ ಕಾನೂನಿನ 31ನೆಯ ವಿಧಿಯಲ್ಲಿ ಕಾನೂನು ನೆರವು ಮಂಡಳಿಗೆ ಕಾರ್ಯಕಲಾಪಗಳನ್ನು ಮಾಡುವುದಕ್ಕಾಗಿ ಕೆಲವು ವಿಧಿವಿಧಾನಗಳನ್ನು ಮಾಡಿಕೊಳ್ಳುತ್ತಾರೆ. ಈ 31ರ ವಿಧಿಯಲ್ಲಿನ ರೆಗುಲೇಷನ್‌ಗೆ ರೆಟ್ರಾಸ್‌ಪೆಕ್ಟೀವ್ ಎನ್ನತಕ್ಕ ಪರವನ್ನು ಸೇರಿಸಬೇಕಾಗಿದೆ. ತಾವುಗಳು ಏಕೆ ಎಂದು ಕೇಳಬಹುದು, ಈಗ ರೆಗ್ಯುಲೇಷನ್ ಮಾಡಲಾಗಿದೆ, ಅನಂತರ ಅದನ್ನು ಕೆಲವು ಸಂದರ್ಭಗಳಲ್ಲಿ ಸದನದ ಮುಂದೆ ಮಂಡಿಸಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಇಲ್ಲಿ ರೆಗುರೇಷನ್‌ಇದೆ ಅದು ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಅದು ಕಾನೂನಿನ ಪ್ರಾಕಾರ ಜಾರಿಗೆ ಬರಬೇಕಾಗಿರತಕ್ಕ ಸಮಯದಲ್ಲಿ ರೆಟ್ರಾಸ್‌ಪೆಕ್ಟೀವ ಎನ್ನತಕ್ಕ ಪದವು ಇಲ್ಲದಿದ್ದರೆ ನಾವು ಮಾಡಿರತಕ್ಕ ರೆಗ್ಯುಲೇಷನ್‌ಗೆ ಯಾವುದೇ ರೀತಿಯಾದ ಕಾನೂನಿನ ಬಲವಿರುವುದಿಲ್ಲ. ಆದುದರಿಂದ ಕಾನೂನಿನ ಬಲವನ್ನು ಕೊಡುವುದಕ್ಕೋಸ್ಕರ ಈ ರೆಟ್ರಾಸ್‌ಪೆಕ್ಟೀವ್ ಎನ್ನತಕ್ಕ ಪದವನ್ನು ನಿಯಮ 31ಕ್ಕೆ ಸೇರಿಸಿ ಇದನ್ನು ಮಾಡಬೇಕಾಗುತ್ತದೆ.

ಕಾನೂನು ನೆರವು ಮಂಡಳಿ ಮಾಡಿರತಕ್ಕ ಕೆಲಸಗಳ ಬಗ್ಗೆ ನಿಮಗೆಲ್ಲರಿಗೂ ಗೊತ್ತಿದೆ. ಲೋಕಅದಾಲತ್ ಮೂಲಕ, ವ್ಯಾಜ್ಯಗಳನ್ನು ಇತ್ಯರ್ಥ ಮಾಡುವುದು ಮತ್ತು ಇದಕ್ಕಾಗಿ ವಿಧಿವಿಧಾನಗಳನ್ನು ನಾವು ಮಾಡಿಬಿಟ್ಟಿದ್ದೇವೆ. ಆದ್ದರಿಂದ ಈ ರೆಟ್ರಾಸ್‌ಪೆಕ್ಟೀವ್‌ಎನ್ನತಕ್ಕ ಪದವನ್ನು ನಾವು ವಿಧಿ31ರಲ್ಲಿ ಅಳವಡಿಸಿಕೊಂಡಾಗ ಅದಕ್ಕಾ ಕಾನೂನಿನ ಸ್ಥಿರತೆ ಬರುತ್ತದೆ ಎನ್ನತಕ್ಕ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ತಾವು ಖಿಡಕ್ಕೆ ಮಂಜೂರಾತಿಯನ್ನು ಕೊಡಬೇಕು. ಇದರಲ್ಲಿ ಯಾವುದೆ ರೀತಿಯಾದ ಒಳ ಒಪ್ಪಂದಗಳಿಲ್ಲ. ಕಾನೂನಿನ ಬಲವನ್ನು ಕೊಡುವುದಕೋಸ್ಕರವಾಗಿ ಈ ರೆಟ್ರಾಸ್‌ಪೆಕ್ಟೀವ್ ಪದವನ್ನು ಸೇರಿಸುವ ಹಿನ್ನಲೆಯಲ್ಲಿ ಇದನ್ನು ತಂದಿದ್ದೇವೆ. ಆದ್ದರಿಂದ ತಾವು ದಯಮಾಡಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೆ, ಇದು ಪ್ರಪ್ರಥಮವಾಗಿ ಜಾರಿಗೆ ಬಂದಿರತಕ್ಕದ್ದು. ಹೊಸದರಲ್ಲಿ ಕೆಲವು ಎಡರುತೊಡರುಗಳು ಆಗುವುದು ಸರ್ವೇಸಾಮಾನ್ಯ ಅಂಥ ತೊಡಕುಗಳನ್ನು ನಾವು ಪತ್ತೆ ಮಾಡಬೇಕಾಗಿದೆ ಆದರೆ ತಾವು ಇಲ್ಲಿ ಹೇಳಿದ್ದೀರಿ

'... make reglations with retrospective effect to meet unforeseen... ಅಂತ

ಈಗ ತಾವು ಮಾಡಿರುವ ರೆಗ್ಯುಲೇಷನ್ ಏನಾದರೂ ತಪ್ಪಾಗಿದೆಯ? ಆ ರೀತಿಯಾಗಿದ್ದರೆ ಏನು ಮಾಡಿದ್ದೀರಿ ಇದರಲ್ಲಿ ಏನಾದರೂ ತಪ್ಪಾಗಿದ್ದರೆ ಅದಕ್ಕೋಸ್ಕರ ಏನು ಮಾಡಬೇಕಾಗಿದೆ ಎಂಬುದರ ಬಗ್ಗೆ ತಾವು ಹೇಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಈ ಕಾನೂನು ನೆರವು ಮಂಡಳಿಯಲ್ಲಿ ಇದುವರೆಗೆ ಯಾರಿಗೆ ಸರಿಯಾದ ನೆರವು ಸಿಕ್ಕಬೇಕಾಗತ್ತೋ ಅವರಿಗೆ ಸಿಕ್ಕಿಯೂ ಇಲ್ಲ, ಸಿಕ್ಕುವುದೂ ಇಲ್ಲ. ಅದರ ಬಗ್ಗೆ ಸಮಯ ಬಂದಾಗ ಮಾತನಾಡುತ್ತೇನೆ. ಆದರೆ ಇವರು unforeseen' ಎಂದು ಏನು ಹೇಳಿದ್ದಾರೆ ಅದು ಕಾಣದ, ತೆರೆಯ ಹಿಂದೆ ಏನು ನಡೆದಿದೆ ಅದನ್ನು ನಾವು ತಿಳಿದುಕೊಳ್ಳಬೇಕು. ಆ ರೀತಿ ಏನಾದರು ನಡೆದಿದ್ದರೆ ಅದನ್ನು ಸರಿಪಡಿಸುವುದಕ್ಕೇನಾದರು ನೀವೇನಾದರೂ ಇದನ್ನು ಮಾಡುವುದಿದ್ದರೆ ಅದೇನು ನಡೆದಿದೆ ಎಂಬುದನ್ನು ನಮಗೆ ತಿಳಿಸಿದರೆ ಕಾನೂನಿಗೆ ರೆಟ್ರಾಸ್‌ಪೆಕ್‌ಟೀವ್‌ನ್ನು ಮಾಡಿಕೊಡಲು ಸಾಧ್ಯವಾಗುತ್ತದೆ.ತಾವು ಏನು ಅಲ್ಲಿ ಮಾಡಿದ್ದೀರಿ ಎಂಬ ಬಗ್ಗೆಯೇ ಹೇಳುವುದಿಲ್ಲ ಇಲ್ಲಿ unforeseen, retrospectively ಎಂದು ತಂದರೆ ಇಲ್ಲಿ ಏನು ಬೇಕಾದರೂ ಮಾಡಿರಲಿ, ಅದು ಸರಿಯಾಗುವುದಿಲ್ಲ. ನೀವು ಮಾಡಿದ್ದೆಲ್ಲ ಸರಿ ಎನ್ನುವುದನ್ನು ನಾವು ಖಂಡಿತವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಲೀಗಲ್ ಬೋರ್ಡ್‌ನಲ್ಲಿ ಏನೇನು ದುರುಪಯೋಗವಾಗಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ವಿಚಾರಣೆಯಾಗಲಿ, ಕಾರುಗಳ ದುರುಪಯೋಗವಾಗಿರುವುದೆಲ್ಲಾ ಗೊತ್ತಿದೆ. ಅವುಗಳನ್ನೆಲ್ಲ ಈಗ ಸರಿ ಪಡಿಸಲು ನೀವು ಹೋಗಿದ್ದೀರಿ? ನಾವು ಇದರ ಬಗ್ಗೆ ಕೇಳಬೇಕಾಗುತ್ತದೆ.

ಅಲ್ಲಿ ಹಣದ ಮತ್ತು ಇತರೆ ಎಲ್ಲಾ ರೀತಿಯಾದ ದುರುಪಯೋಗವಾಗಿದೆ. ಆ ದಿಕ್ಕಿನಲ್ಲಿ ದುರುಪಯೋಗವಾಗಿರುವ ಹಣವನ್ನೆಲ್ಲ ರೆಗ್ಯುಲೇಟ್ ಮಾಡುತ್ತೇವೆಂದು ನೀವು ಈ ರೆಗ್ಯುಲೇಷನ್‌ನ್ನು ತರುವುದಾದರೆ ಇದು ಸರಿಯಾಗುವುದಿಲ್ಲ. ನೀವೇನು ರೆಗ್ಯುಲೇಷನ್‌ನ್ನು ಸರಪಡಿಸಲು ಯಾವ ಅನ್ಯಾಯವನ್ನು ಸರಿಪಡಿಸಲು ತಾವು ಹೋಗಿದ್ದೀರಿ ಅದರ ಬಗ್ಗೆ ನಮಗೆ ಮಾಹಿತಿ ಬೇಕಾಗುತ್ತದೆ. ಹಿಂದೆ ಇದ್ದಂಥ ನಿಮ್ಮ ಕಾನೂನು ಕಾರ್ಯದರ್ಶಿಯವರು ಅಡ್ವೋಕೇಟ್ ಜನರರ್‌ರವರು ಈ ಲೀಗಲ್ ಬೋರ್ಡ್ ಮೇಲೆ ವರದಿಯನ್ನು ಸಹ ಕೊಟ್ಟಿದ್ದಾರೆನ್ನತಕ್ಕ ವಿಚಾರವನ್ನು ತಿಳಿದುಕೊಂಡಿದ್ದೀರಿ. ಆದ್ದರಿಂದ ನಾನು ಕೇಳುತ್ತಿದ್ದೇನೆ ಇವುಗಳನ್ನೆಲ್ಲ ಸರಿಪಡಿಸುವುದಕ್ಕೋಸ್ಕರ ಇದನ್ನು ಮಾಡಿದ್ದೀರೋ ಅಥವಾ ಇದರಲ್ಲಿ ನಿಜವಾದ ಉದ್ದೇಶವಿದ್ದರೆ ನಾವೆಲ್ಲ ಸಹಕಾರ ಕೊಡೋಣ ಕಾನೂನಿನ ನೆರವು ಪ್ರತಿಯೊಬ್ಬರಿಗೂ ಸಹ ಬೇಕಾಗಿದೆ. ಆದರೆ ಕಾನೂನಿನ ನೆರವು ಸರಿಯಾಗಿ ಸಿಕ್ಕುತ್ತಿಲ್ಲ. ಆ ರೀತಿ ಸರಿಯಾಗಿ ಕಾನೂನಿನ ನೆರವು ಸಿಕ್ಕಬೇಕಾಗಿದ್ದರೆ ಏನೇನು ಮಾಡಬೇಕು ಎಂಬುದಕ್ಕೆ ತಮ್ಮ ಜೊತೆ ಸಹಕರಿಸಲು ನಾವು ಸಹ ಸಿದ್ದರಾಗಿದ್ದೇವೆ. ಒಂದು ಮಾತನ್ನು ಮಾನ್ಯ ಕಾನೂನು ಸಚಿವರು ತಿಳಿದುಕೊಳ್ಳಬೇಕು. ಅದೇನೆಂದರೆ ಇಷ್ಟು ವರ್ಷಗಳಾದರೂ ಸಹ ಕರ್ನಾಟಕದಲ್ಲಿ ಮಹಿಳಾ ವಕೀಲರ ವೇದಿಕೆಎಂಬುದು ಇದೆ ಎಂದು ಸಹ ಅವರಿಗೆ ಗೊತ್ತಿಲ್ಲ. ಮಂತ್ರಿಗಳಿಗೆ ಹೇಳಿ ಯಾಯಿತು, ಲೀಗಲ್ ಬೋರ್ಡ್‌ಗೆ ಹೇಳಿಯಾಯಿತು ಮಹಿಳಾ

ವಕೀಲರನ್ನು ಸೇರಿಸಿ ಕೊಂಡು ಇದನ್ನು ಮಾಡಬೇಕೆಂದು ಹೇಳಿಯಾಯಿತು. ಆದರೆ ಇದುವರೆಗೆ ಸಹ ಇದನ್ನು ಮಾಡಿಲ್ಲ. ಲೀಗಲ್ ಬೋರ್ಡಿಸವರನ್ನು ಸೇರಿಸಿಕೊಂಡು ಮಾಡುತ್ತಾರೆ. ಇವರನ್ನು ಬಿಡುತ್ತಾರೆ, ಆದ್ದರಿಂದ ನಾನು ತಾವೇನು ತರುತ್ತಿದ್ದೀರಿ ಅದರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲಿ ಏನೇನಾಗಿದೆ ಎಂಬುದನ್ನು ನೋಡಬೇಕಾಗುತ್ತದೆ, ವಿಚಾರಣೆ ಮಾಡಬೇಕಾಗುತ್ತದೆ.

ಆದ್ದರಿಂದ ತಾವು ಏನು ತರುತ್ತಿದ್ದೀರಿ ಅದರ ಬಗ್ಗೆ ದಯವಿಟ್ಟು ಹೇಳಿ. ನಮ್ಮನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳಿ. ಇಲ್ಲೇ ಅದನ್ನು ಕೊಡಬೇಕೆಂದಿಲ್ಲ, ಬೇಕಾದರೆ ಸಭಾಧ್ಯಕ್ಷರ ಕೊಠಡಿಯಲ್ಲಿ ಅದರು ಕೊಡಿ, ನಾವು ಅದನ್ನು ನೋಡಿ ನಂತರ ಅದಕ್ಕೆ ಒಪ್ಪಿಗೆಯನ್ನು ಕೊಡೋಣ. ಈ ರೀತಿ ಮಾಡುವುದರಲ್ಲಿ ತಪ್ಪೇನಿಲ್ಲ. ಆದರೆ ಮೊಗಮ್ಮಾಗಿ' with retrospective affect,' 'unforeseen' ಕಾಣದ ಕೈಯಲ್ಲಿ, ಆಗಬಾರದ್ದೆಲ್ಲ ಆಗಿದೆ. ಅವುಗಳನ್ನೆಲ್ಲ ಸರಿಪಡಿಸಲು ಮಾಡುತ್ತೇವೆಂದರೆ ದಯವಿಟ್ಟು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ದಯಮಾಡಿ ಮಾಹಿತಿಯನ್ನು ಕೊಡಬೇಕು, ಇದರ ಬಗ್ಗೆ ಪರಿಶೀನೆ ಮಾಡಿ ಮುಂದೆ ತೀರ್ಮಾನ ತೆಗೆದುಕೊಳ್ಳಣವೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ abuse of money ಆಗಿದೆಯಾ abuse of power, ನಲ್ಲಿ ಆಗಿದೆಯಾ ಅಥವಾ abuse in establishment ನಲ್ಲಿ ಈ ತರಹ ಆಗಿದೆಯೂ. ಈ ಮೂರು ಕ್ಯಾಟಗರಿಯಲ್ಲಿ ಏನೇನಾಗಿದೆ ಎಂಬ ಬಗ್ಗೆ ಕ್ಯಾಟಗಾರಿಕಲ್ ಆಗಿ ಹೇಳಿ.

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇನು ಈ ಬಿಲ್ಲನ್ನು ತಂದಿದ್ದಾರೆ, ಅದರ ಪ್ರಕಾರ ರೆಟ್ರಾಸ್‌ಪೆಕ್‌ಟೀವ್ ಎಫೇಕ್ಟ್‌ನ್ನು ಈ ಒಂದು ರೆಗ್ಯುಲೇಷನ್‌ಗೆ ಕೊಡುವುದರಿಂದ ಬಹಳಷ್ಟು ದೂರಗಾಮಿ ಪರಿಣಾಮವಾಗುತ್ತದೆ. ಆ ರೀತಿ ಅವರು ತರುವ ಮೊದಲು ಅದರ ಬಗ್ಗೆ ನಿರ್ದಿಷ್ಟವಾದ ಉದಾಹರಣೆಯನ್ನು ಕೊಡಬೇಕಾಗಿತ್ತು ಕೇವಲ ಕಾರಣಕ್ಕೆ ಅದು ಎಂದು ಹೇಳಬೇಕಾಗಿತ್ತು, ತಮ್ಮ ಈ statement of objat of rewards ಏನಿದೆ, ಇದರಲ್ಲಿ ಸ್ಪೆಸಿಫಿಕ್ಕಾಗಿ ಇಲ್ಲ. ಅಂತಹ ಪ್ರಸಂಗ ಏಕೆ ಬಂತು ಎಂಬುದನ್ನು ಹೇಳಬೇಕಾಗಿತ್ತು. ಅದನ್ನು ಹೇಳಲಾರದೆ ಇಂತಹ ಬಿಲ್ ತಂದಿದ್ದು ತೀರಾ ತಪ್ಪು ಅದಕ್ಕೆ ಇದರ ಬಗ್ಗೆ ಬಹಳಷ್ಟು ವಿಚಾರ ಮಾಡಿ. ಏಕೆಂದರೆ ಎಷ್ಟೋ ಕಾನೂನುಗಳು ಇವೆ. ಅದರಲ್ಲಿ ಈ ಒಂದು ಕಾನೂನಿನಲ್ಲಿ, ಕರ್ನಾಟಕ ಲೀಗಲ್ ಏಡ್ ಬೋರ್ಡ್ ಇದರಲ್ಲಿ ಈ ರೆಟ್ರಾನ್ಸ್‌ಕ್ಟೀವ್ ಐಫೆಕ್ಟ್ ಇದೆ. ಅದಕ್ಕೆ ತಾವು ರೆಗ್ಯುಲೇಷನ್ ತರಬೇಕೆಂದು ಏಕೆ ಸರ್ಕಾರಕ್ಕೆ ಉದ್ದೇಶ ಮಾಡಿದ್ದು? ಇದರ ಬಗ್ಗೆ ಸ್ವಲ್ಪ ವಿವರಗಳನ್ನು ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ ವಾಟಾಳ್ ನಾಗರಾಜ್‌ರವರು ಈ ಕಡೆ ಸ್ವಲ್ಪ ಗಮನಿಸಬೇಕು. ಮಾನ್ಯ ಸಭಾಧ್ಯಕ್ಷರೆ, ಹಿರಿಯರಾದ ರಾಮಕೃಷ್ಣರವರು ನನ್ನ ಸ್ಥಾನದಲ್ಲಿ ತಾವು ಕೆಲಸ ಮಾಡಿದ್ದೀರಿ, ಶ್ರೀಮಾನ್ ರಾಮಕೃಷ್ಣರವರು ತಮ್ಮ ಕಾಲದಲ್ಲಿ ಕೂಡ ಇದನ್ನು ಕಾರ್ಯಕೂಪಕ್ಕೆ ತಂದಿದ್ದಿರಿ ಮತ್ತು ಒಳ್ಳೆಯ ಉತ್ತಮ ಕೆಲಸ ಮಾಡುತ್ತಿದ್ದೀರೆಂದು ನನಗೆ ಗೊತ್ತಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಏನೆಲ್ಲಾ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಯಿತು, ಇದರಲ್ಲಿ ಕಾಣದ ಕೈ ಒಳಗಡೆ ಇದೆ ಮುಗುಮ್ಮಾಗಿ ನೀವು ಮಾಡುತ್ತೀರಿ ಎಂದು ಹೇಳಿದರು. ಯಾವುದೂ ಕಾಣದ ಕೈ ಇಲ್ಲ, ಮುಗುಮ್ಮಾಗಿಯೂ ಇಲ್ಲ, ಕಾಣದ ಕೈ ಇದ್ದರೆ ಅದನ್ನು ಕಾಣುವ ಹಾಗೆ

ಕಾರ್ಯಕ್ರಮ ಕೈಗೊಳ್ಳುತ್ತೇನೆ. ಈ ಕಾರ್ಯಕ್ರಮ ಮಾಡುತ್ತೇನೆ. ಕಾಣದ ಕೈ ಎಲ್ಲಾದರೂ ಇದ್ದರೆ ಅದು ಕಾಣುವ ಹಾಗೆ ಮಾಡುತ್ತೇನೆ. ಮುಗುಮ್ಮಾಗಿ ಅಂತ ಹೇಳುತ್ತಾ ಇರತಕ್ಕಂಥಾದ್ದನ್ನು ಬಹುಶಃ ನಾನು ಇಲ್ಲಿ ಇರತಕ್ಕಂತಹ ಸಂದರ್ಭದಲ್ಲಿ ಅದನ್ನು ಮಾಡಲು ಬಿಡುವುದಿಲ್ಲ. ಇಷ್ಟು ಭರವಸೆಗಳು ನಾನು ನಿಮಗೆ ಕೊಡುತ್ತೇನೆ. ಇನ್ನೊಂದು ನೀವುಹೇಳಿರತಕ್ಕಂಥಾದ್ದು ಕಾನೂನು ನೆರವು ಮಂಡಳಿಯಲ್ಲಿ ಏಕೋ ಏನೋ ಗೊತ್ತಿಲ್ಲ ಅಖಿಲ ಭಾರತ ಮಹಿಳೆಯರ ಮಹಿಳಾ ವಕೀಲರ ಸಂಘ ಎಂದು ಇದೆ ಅದಕ್ಕೆ ಶ್ರೀಮತಿ ಪ್ರಮೀಳಾ ರವರು ಅಧ್ಯಕ್ಷರು ಕೂಡ ಆಗಿದ್ದಾರೆ. ನಾನು ಕಾನೂನು ಮಂತ್ರಿಯಾಗಿದ ಕೂಡಲೇ ಅದನ್ನು ನಾನೇ ಗುರುತು ಹಚ್ಚಿದೆ. ಅವರಿಗೆ ಈ ಸಾರಿ 15 ಸಾವಿರರೂಪಾಯಿ ಕೊಟ್ಟೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : 15 ಸಾವಿರ ಕೊಟ್ಟಿರಿ, ಆದರೆ ಕಾನೂನು ಕಾರ್ಯದರ್ಶಿ ಹತ್ತಿರ ಹೋದಾಗ ಅದು ಕಡಿಮೆಯಾಯಿತು, ಅಲ್ಲಿಂದ ಹಣಕಾಸು ಇಲಾಖೆಗೆ ಹೋದಾಗ ಕೇವಲ 5000 ರೂಪಾಯಿ ಬಂದಿದೆ. ಅದನ್ನು ನಾನು ಮಾತನಾಡುವಾಗ ಹೇಳಿದ್ದೇನೆ. ತಮ್ಮ ಆದೇಶಕ್ಕೆ ತಮ್ಮ ಅಧಿಕಾರಿಗಳು ಮಾನ್ಯತೆ ಕೊಟ್ಟಿಲ್ಲ. ಮಾಡಿಲ್ಲ ಅದರ ಬಗ್ಗೆ ನಾನು ಡಾಕ್ಯುಮೆಂಟ್ಸ್ ತಂದಿದ್ದೇನೆ, ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಹಿಳೆಯರ ಮಹಿಳಾ ವಕೀಲರ ಸಂಘ ಬಿಟ್ಟು ನಾನು ಕೆಲಸ ಮಾಡುತ್ತಿಲ್ಲ, ನಾನೂಒಬ್ಬ ವಕೀಲ. ಮಹಿಳಾ ವಕೀಲರನ್ನು ಬಿಟ್ಟು ನಾವು ವಕೀಲರ ಹೋಗಿ ಕೆಲಸ ಮಾಡುವುದು, ಆ ಕೆಲಸ ಮಾಡುವುದಿಲ್ಲ. ಮತ್ತು ಲೀಗಲ್ ಏಡ ಬೋರ್ಡ್ ಯಾವುದು ಇದೆ, ಮಾನ್ಯ ಸಭಾಧ್ಯಕ್ಷರೆ, ನಾನು ಈಗಾಗಲೇ ತೀರ್ಮಾನ ತೆಗೆದುಕೊಂಡು ಬಿಟ್ಟಿದ್ದೇನೆ. ಅಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೆ, ಪ್ರಮೀಳರವರ ಅಧ್ಯಕ್ಷರಾಗಿತ್ತಾರೆ ಅಂತ ಅಲ್ಲಿ ಯೂರು ಅಧ್ಯಕ್ಷರಾಗಿರುತ್ತಾರೆ ಅವರು ಅದರ ಸದಸ್ಯರಾಗಿರಬೇಕು. ನಾವು ಅವರು ಒಟ್ಟಿಗೇ ಈ ಸದಸ್ಯರಲ್ಲಿ 1978 ರಿಂದ 73 ರವರೆಗೆ ಕೂತಿದ್ದೇವೆ. ನನಗೆ ಗೊತ್ತಿದೆ ಅವರು ಹೇಗೆ ಕೆಲಸ ಮಾಡುತ್ತಾರೆ ಎಂದು. ನಿಮ್ಮನ್ನು ಕೇಳುತ್ತೇನೆ, ಯಾರು ಅಧ್ಯಕ್ಷರಾಗುತ್ತಾರೆ ಅವರಿಗೂ ಕೇಳುತ್ತೇನೆ. ಆದರೆ ಲೀಗಲ್ ಎಡ್ ಬೋರ್ಡ್‌ನಲ್ಲಿ ಈ ಹಿಂದೆ ಏನು ಅವ್ಯವಹಾರ ನಡೆದಿದೆ, ಅದರ ಬಗ್ಗೆ ಕೂಡ ನಾನು ಈಗಾಗಲೇ ಕೆಲವು ಕ್ರಮಗಳನ್ನು ಕೈಗೊಂಡಿದ್ದೇನೆ. ಇನ್ನು ಮುಂದಕ್ಕೆ ಹಿಂದೆ ನಡೆದಿರತಕ್ಕಂಥಾದ್ದು ಏನಿದೆ ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತೇನೆ. ಮುಂದೆ ನಡೆಯಲಿಕ್ಕೆ ಅದಕ್ಕೆ ಆಸ್ಪದ ಕೊಡುವುದಿಲ್ಲ. ಇದು ಮಾಡುತ್ತೇನೆ. ಇನ್ನು ಈಗ ರೆಗ್ಯುಲೇಷನ್ಸ್ ಏನು ಈ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಎಂದು ಹೇಳಿ ಅವ್ಯವಹಾರ ಮಾಡಿದ್ದನ್ನು ತಿಂದಿದ್ದನ್ನು, ಕಾಣದ ಕೈ ಮಾಡಿರುವುದನ್ನು ಏನಾದರೂ ನೀವು ರೆಗ್ಯುಲರೈಸ್ ಮಾಡುವುದಕ್ಕೆ ಅಂದರೆ ಅಲ್ಲ. ಯಾವುದನ್ನಾದರೂ ನಾವು ರೆಗ್ಯುಲರೈಸ್ ಮಾಡಬೇಕಾದರೂ ಕೂಡ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಈ ಸದನದ ಮುಂದೆ ನಾವು ಅದನ್ನು ಮಂಡಿಸಲೇಬೇಕಾಗುತ್ತದೆ. ದಯವಿಟ್ಟು ತಾವು ನೋಡಿ, ತಾವು ರೆಟ್ರಾಸ್ಪೆಕ್ಟೀವ್ ರೆಗ್ಯುಲೇಷನ್ ಮಾಡಬೇಕಾದರೂ ಈ ಸದನದ ಮುಂದೆ ಮಂಡಿಸಲೇಬೇಕಾಗುತ್ತದೆ.

ಎಲ್ಲಾ ಸದನದ ಸದಸ್ಯರ ಗಮನಕ್ಕೆ ತಂದೇ ಮಾಡಬೇಕಾಗುತ್ತದೆ. ಆದರೆ ಈಗ ತಂದಿರತಕ್ಕಂತಹ ಹಲವಾರು ಕಾರಣಗಳಲ್ಲಿ ಒಂದು ಕಾರಣ ಯಾವುದು ಅಂದರೆ, ಅಲ್ಲಿದ್ದಂಥ ಸಿಬ್ಬಂದಿ ಪೈಕಿ ಕೆಲವರು ನಿವೃತ್ತರಾಗಿದ್ದಾರೆ. ನಿವೃತ್ತಿಯಾಗಿರರುವವರಿಗೆ ಇವತ್ತು ಪೆನ್‌ಷನ್ ಕೊಡಲಿಕ್ಕೆ ಅಲ್ಲಿ ಕಾರ್ಯಕ್ರಮ ಇಲ್ಲ, ಬಹುಶಃ ಅದನ್ನು ಈಗ ಮಾಡಬೇಕಾಗುತ್ತದೆ. ಅದನ್ನು ಮಾಡಲಿಕ್ಕೋಸ್ಕರ ಮೊದಲನೆಯದಾಗಿ, ಈ ತರಹ ಎಲ್ಲಾದರೂ ವಿಚಾರಗಳು ಬಂದಾಗ ಬಹುಶಃ ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಿಕ್ಕೆ

ಈ ಒಂದು ತಿದ್ದುಪಡಿಯನ್ನು ತಂದಿದ್ದೀವಿ. ಅದರಿಂದ ರೆಗ್ಯುಲೇಷನ್ ನಿವೃತ್ತಿಯಾದವರಿಗೆ ಪೆನ್‌ಷನ್ ಕೊಡಲಿಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳತಕ್ಕಂತಹ ಹಿನ್ನಲೆಯಲ್ಲಿ ನಾನು ಇದನ್ನು ತಂದಿದ್ದೇನೆ. ಇಷ್ಟು ಭರವಸೆಯನ್ನು ಕೊಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಯಾವುದೇ ಈ ತರಹದ ಗುಟ್ಟಾಗಿ ಮಾಡಿ ಸದನದ ಮುಂದೆ ತರದೆ ನಾವು ಬಿಡುವುದಿಲ್ಲ. ಆ ಕೆಲಸವನ್ನು ನಾವು ಮಾಡುವುದಿಲ್ಲ ಆದ್ದರಿಂದ ಇದಕ್ಕೆ ತಮ್ಮ ಅ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆದರೆ

"1995ನೇ ಸಾಲಿನ ಕರ್ನಾಟಕ ಕಾನೂನು ನೆರವು ಮಂಡಳಿ ( ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 3 ರವರೆಗೆ**

ಉಪಾಧ್ಯಕ್ಷರು : "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ:

"ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 1995 ನೇ ಸಾಲಿನ ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ.

"1995 ರ ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**